# ಕಲ್ಯಾಣದ ಸತ್ಯಪಥ

ಬಸವಣ್ಣ ಮತ್ತು ಕುವೆಂಪು ಕನ್ನಡ ವೈಚಾರಿಕ ಪರಂಪರೆಯ ಎರಡು ಶಿಖರಗಳು. ಬಸವಣ್ಣನ 'ಕಲ್ಯಾಣ ಕರ್ನಾಟಕ'ದ ಬತ್ತದ ನದಿ ಬಸವಕಲ್ಯಾಣದಲ್ಲಿ ಉಗಮಗೊಂಡು – ಕೊಡೆಕಲ್ಲ ಬಸವಣ್ಣ, ಮಧ್ಯ ಕರ್ನಾಟಕದ ನಾಯಕನಹಟ್ಟಿ ತಿಪ್ಪೇಸ್ವಾಮಿ, ದಕ್ಷಿಣ ಕರ್ನಾಟಕದ ತುದಿಯಲ್ಲಿರುವ ಮಂಟೆಸ್ವಾಮಿ ಹಾಗೂ ಮಾದೇಶ್ವರನವರೆಗೂ ಹರಿದಿದೆ. ಹೀಗೆ ಹರಿದ ಕಲ್ಯಾಣದ ನದಿ ತಾನು ನಡೆದ ದಾರಿಯುದ್ದಕ್ಕೂ ಜನಕಲ್ಯಾಣಕ್ಕಾಗಿ ದುಡಿದ ಸಂತರನ್ನು, ಸಾಧಕರನ್ನು ನಾಡಿಗೆ ನೀಡಿದೆ. ಕುವೆಂಪು ಕೂಡ 20ನೇ ಶತಮಾನದ ಕನ್ನಡ ವೈಚಾರಿಕ ಪರಂಪರೆಯನ್ನು ಉಜ್ವಲಗೊಳಿಸಿದ ಇನ್ನೊಂದು ಜೀವನದಿ. ಕುವೆಂಪು ತಮ್ಮ ಜೀವಿತದುದ್ದಕ್ಕೂ ಪ್ರತಿಪಾದಿಸಿದ ವೈಚಾರಿಕ ಚಿಂತನೆಗಳೆಲ್ಲವೂ 'ವಿಶ್ವಪ್ರಜ್ಞೆ'ಯ ಮಾನವ ಕಲ್ಯಾಣಕ್ಕೆ ಸಂಬಂಧಿಸಿದ್ದು. ಇವರ ವೈಚಾರಿಕ ಚಿಂತನೆಗಳು ಪ್ರಕೃತಿ, ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ, ಮೌಢ್ಯವಿಲ್ಲದ ಧಾರ್ಮಿಕತೆ, ಜ್ಞಾನ, ಜಾತ್ಯತೀತತೆ ಮತ್ತು ಎಲ್ಲ ಬಗೆಯ ದಾಸ್ಯಗಳಿಂದ ವಿಮೋಚನೆಗೆ ಸಂಬಂಧಿಸಿದ್ದು. ನಾಡಿನ ಕಲ್ಯಾಣಕ್ಕಾಗಿ ಕುವೆಂಪು ತೋರಿದ ಸತ್ಯ ಪಥ ಇದು. ಈ ವೈಚಾರಿಕ ನಿಲುವುಗಳು ಕುವೆಂಪು ಅವರ ಎಲ್ಲ ಸೃಜನಶೀಲ ಬರಹ, ಚಿಂತನೆ ಮತ್ತು ಅವರ ಹೊರಮುಖಿ ವ್ಯಕ್ತಿತ್ವದ ಪ್ರಧಾನ ಗುಣವೇ ಆಗಿದೆ. ಆದ್ದರಿಂದಲೇ ಕುವೆಂಪು 'ನನ್ನ ನಿಜವಾದ ಸಂದೇಶವಿರುವುದು ವೈಜ್ಞಾನಿಕ ದೃಷ್ಟಿ; ವಿಚಾರಬುದ್ಧಿಯ ವಿಶ್ವಮಾನವ ತತ್ತ್ವದಲ್ಲಿ' ಎಂದು ಹೇಳಿದರು.

ಬಸವಣ್ಣ, ಕುವೆಂಪು ಅವರಿಗೆ 'ವೈಚಾರಿಕತೆ' ಎನ್ನುವುದು ಕೇವಲ ಹೊರಮುಖಿಯಾದದ್ದಲ್ಲ! ಪ್ರದರ್ಶನಾತ್ಮಕವೂ ಅಲ್ಲ! ಅದು ಯಾವುದೇ ದ್ವಂದ್ವಗಳಿಲ್ಲದೆ, ಒಡಕಿಲ್ಲದೆ ಒಳಗೇ ಪಕ್ವಗೊಂಡು ಬಹಿರಂಗದಲ್ಲಿ ಅರಳಿದ ಸುಗಂಧ ಬೀರುವ ಚಿಂತನೆಯ ಹೂವು. ಭಾರತದ ಚಾತುರ್ವರ್ಣ ವ್ಯವಸ್ಥೆ ಸೃಷ್ಟಿಸಿದ ಜಾತಿಪದ್ಧತಿ, ಧಾರ್ಮಿಕ ಮೌಢ್ಯ, ಅಸ್ಪೃಶ್ಯತೆ, ಲಿಂಗಭೇದ ನೀತಿ, ಧಾರ್ಮಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಬೋಧಿಸುವ ಎಲ್ಲ ಪಠ್ಯಗಳನ್ನು, ಚಿಂತನೆಗಳನ್ನೂ ಬಸವಣ್ಣ ಸಾರಾಸಗಟಾಗಿ ತಿರಸ್ಕರಿಸಿ ತನ್ನನ್ನು ತಾನು ಕೆಳವರ್ಗದವರೊಂದಿಗೆ ಗುರುತಿಸಿಕೊಂಡ. ಬಸವಣ್ಣ ಹೇಳಿದ ಕಾಯಕ ತತ್ತ್ವವನ್ನೇ ಕುವೆಂಪು 'ಜಲಗಾರ' ನಾಟಕದಲ್ಲಿ ಶಕ್ತಿಶಾಲಿಯಾಗಿ ನಿರೂಪಿಸಿದರು. ದೇವರು ಮತ್ತು ದೇವಾಲಯಗಳನ್ನೇ ಪ್ರಶ್ನಿಸಿದರು. ಹಾಗೆಯೇ ರಾಮಾಯಣ ಮತ್ತು ಮಹಾಭಾರತಗಳ ಸಿದ್ಧ ಪಠ್ಯವನ್ನು ಪುನರ್ ವ್ಯಾಖ್ಯಾನಿಸಿ ತಮ್ಮ ಯುಗದ ಕಾಲಮಾನಕ್ಕೆ ತಕ್ಕಂತೆ ಕಡೆದರು. 'ಹಿಂದಣ ಅಮೂಲ್ಯ ಸಾಹಿತ್ಯವನ್ನೆಲ್ಲ ನೀವು ಎಸೆಯುವುದಕ್ಕೆ ಹೋಗದೆಯೆ, ಆ ಚಿನ್ನದ ಆಭರಣಗಳನ್ನೆಲ್ಲ ಕರಗಿಸಿ ನಮ್ಮ ಧ್ಯೇಯಕ್ಕೆ, ನಮ್ಮ ಇಷ್ಟಕ್ಕೆ ಅನುಸಾರವಾಗಿ ಅವುಗಳನ್ನು ಎರಕ ಹೊಯ್ದುಕೊಳ್ಳಬೇಕು' ಎಂದು ಹೇಳಿ, ಈ ತಾತ್ವಿಕ ನೆಲೆಯಲ್ಲಿಯೇ 'ಶ್ರೀ ರಾಮಾಯಣ ದರ್ಶನಂ', 'ಮಹಾರಾತ್ರಿ', 'ಶೂದ್ರ ತಪಸ್ವಿ', 'ಬೆರಳ್ ಗೆ ಕೊರಳ್', 'ಶ್ಮಶಾನ ಕುರುಕ್ಷೇತ್ರಂ' ಕೃತಿಗಳನ್ನು ಮಹಾಕರುಣೆಯ ದರ್ಶನದ ಮೂಲಕ ಪುನರ್ ಸೃಷ್ಟಿಸಿದರು. ಎಲ್ಲ ಬಗೆಯ ಅಧಿಕಾರ ಕೇಂದ್ರಗಳನ್ನು ಧಿಕ್ಕರಿಸುವ ಬಸವಣ್ಣ ಮತ್ತು ಕುವೆಂಪು ಅವರಂತಹ ಲೋಕಹಿತದ ದಾರ್ಶನಿಕರು ಕಾಲಪ್ರವಾಹಕ್ಕೆ ಎದುರಾಗಿಯೇ ಈಜುತ್ತಿರುತ್ತಾರೆ ಎಂಬುದಕ್ಕೆ ಇವೆಲ್ಲವೂ ಕನ್ನಡ ಪರಂಪರೆಯಲ್ಲಿವೆ. ಕುವೆಂಪು ಅವರು ತಮ್ಮ ಕಾಲದ ಇತರ ಲೇಖಕರಿಗಿಂತ ಭಿನ್ನವಾಗಿ ನಿಲ್ಲುವುದು ಇಲ್ಲಿಯೇ.

'ಈ ದೇಶದ ವರ್ಣ–ವರ್ಗಗಳನ್ನು ಕುರಿತು ಅತ್ಯಂತ ದಿಟ್ಟತನದ ಹಾಗೂ ಯಾವುದೇ ಒಡಂಬಡಿಕೆಗಳಿಲ್ಲದೆ ಪ್ರಶ್ನೆ ಮಾಡಿದಂತೆ, ಅವರ ಸಮಕಾಲೀನರಾದ ಇತರ ಪ್ರಮುಖ ಬರಹಗಾರರಿಗೆ ಆ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ ಅನ್ನುವುದೇ ಕುವೆಂಪು ಅವರ ವಿಶೇಷಗಳಲ್ಲಿ ಒಂದಾಗಿದೆ. ಹಾಗೆಂದರೆ, ಅವರ ಸಮಕಾಲೀನ ಪ್ರಮುಖ ಬರಹಗಾರರು ತಮ್ಮ ಸೃಜನಶೀಲತೆಯ ಉತ್ಕಟ ಕ್ಷಣಗಳಲ್ಲಿ ಈ ಬಗೆಯ ಉಪಾಧಿಗಳನ್ನು ಮೀರುವಲ್ಲಿ ಹಾಗೂ ಸಮಸ್ಯೆಗಳನ್ನು ಎದುರಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿಲ್ಲವೆಂದು ಈ ಮಾತಿನ ಅರ್ಥವಲ್ಲ. ಆದರೆ, ಜಾತಿಪದ್ಧತಿ, ವರ್ಣ ವ್ಯವಸ್ಥೆ, ಮೂಢನಂಬಿಕೆಗಳು, ಸಾಂಸ್ಥಿಕ ಧರ್ಮದ ಪ್ರತಿನಿಧಿಗಳಾದ ದೇವಸ್ಥಾನಗಳು ಹಾಗೂ ಈ ಎಲ್ಲವನ್ನೂ ಬಂಡವಾಳವನ್ನಾಗಿ ಮಾಡಿಕೊಂಡ ಪುರೋಹಿತಶಾಹಿ ಚಾತುರ್ಯಗಳು ಇತ್ಯಾದಿಗಳನ್ನು ನಿರ್ದಾಕ್ಷಿಣ್ಯವಾಗಿ ಹಾಗೂ ಉಗ್ರವಾಗಿ ಚಿಕಿತ್ಸೆಗೊಳಪಡಿಸಿದ ಕುವೆಂಪು ಅವರ ವೈಚಾರಿಕತೆಗೆ ಇರುವ ಬಂಡಾಯದ ಮನೋಧರ್ಮ, ಕ್ರಾಂತಿಕಾರಕ ಲಕ್ಷಣ, ಬೇರೆ ಯಾರಲ್ಲಿಯೂ ಈ ಪ್ರಮಾಣದಲ್ಲಿ ಕಾಣಿಸಿಕೊಳ್ಳುವುದಿಲ್ಲ' (ಜಿ.ಎಸ್. ಶಿವರುದ್ರಪ್ಪ). ಕುವೆಂಪು ಇಂದು ಯಾಕೆ ನಮಗೆ ಮುಖ್ಯರಾಗುತ್ತಾರೆ ಎನ್ನುವುದನ್ನು ಈ ಮಾತುಗಳು ನಮ್ಮ ಅರಿವಿಗೆ ತರುತ್ತವೆ. ಅಂತಿಮವಾಗಿ 'ನೂರು ಮತದ ಹೊಟ್ಟ ತೂರಿ/ಎಲ್ಲ ತತ್ವದೆಲ್ಲೆ ಮೀರಿ' ನಿತ್ಯಯೋಗಿಯೇ ಆಗು, ಆಗು ಎಂದು ಹಾರೈಸುತ್ತಾರೆ. ಕುವೆಂಪು ಕೃತಿಗಳು ತೋರುವ ಕಾಣ್ಕೆ ಇದೆ.

ಬಸವಣ್ಣ ಮತ್ತು ಕುವೆಂಪು ಚಿಂತನೆಗಳು ಪ್ರಸ್ತುತವಾಗುವುದು ಕೇವಲ ಕನ್ನಡ ನಾಡಿಗಲ್ಲ! ಅದು ಮೌಢ್ಯ, ಮತಾಂಧ ಶಕ್ತಿಗಳ ಮೇಲಾಟ, ಮಾನವತೆಯನ್ನು ಅಣಕಿಸುತ್ತಿರುವ ಸರ್ವಾಧಿಕಾರದ ಕ್ರೌರ್ಯ ಮುಂತಾದ ಜಗತ್ತಿಗಂಟಿರುವ ರೋಗಗಳಿಗೆ ಮದ್ದಾಗಬಲ್ಲದು! ಈ ಆಶಯವೇ ಕುವೆಂಪು ಅವರ ಕೃತಿಗಳಲ್ಲಿ 'ಸರ್ವಜನಾಂಗದ ಶಾಂತಿಯ ತೋಟ' ಎಂಬ ರೂಪಕದಲ್ಲಿ ಮೈದಾಳಿದೆ. ಈ ಸಾಹಿತ್ಯಕ ರೂಪಕ ಇಂದು ಕರ್ನಾಟಕದಲ್ಲಷ್ಟೇ ಅಲ್ಲ, ಜಗತ್ತಿನ ಸಾಮಾಜಿಕ ಜೀವನದಲ್ಲಿ ಆಗಬೇಕಾಗಿರುವ ಬದಲಾವಣೆಯ ಆದರ್ಶ ರೂಪಕವೂ ಆಗಿ ವಿಶ್ವವ್ಯಾಪಿಯಾಗಿ ಹಬ್ಬಿದೆ. ಇದು ನಮ್ಮ ನಡುವೆ ಕಾರ್ಯತತ್ಪರವಾಗಬೇಕಾದ ತತ್ತ್ವ. ಈ ಚಿಂತನೆಗಳ ಮೂಲಕ ಬಸವಣ್ಣ ಮತ್ತು ಕುವೆಂಪು ಕಲ್ಯಾಣ ನಾಡಿನ ಕನಸು ಕಂಡ ಕನ್ನಡ ಸಂಸ್ಕೃತಿಯ ದಾರ್ಶನಿಕ ಚೇತನಗಳು. ಈ ದಾರ್ಶನಿಕತೆ ಎನ್ನುವುದು ಅವರ ಸೃಜನಶೀಲ ಕೃತಿಗಳಲ್ಲಿ ಕರಗಿ, ಅವರ ವ್ಯಕ್ತಿತ್ವದಲ್ಲೂ ಹೊರಚಾಚಿಕೊಂಡಿದೆ ಎಂಬುದನ್ನು ಮರೆಯಬಾರದು.

ವಚನಕಾರರು ವೇದ, ಶಾಸ್ತ್ರ, ದೇವರು, ಮೌಢ್ಯ, ಭಕ್ತಿ, ದೇವಾಲಯಗಳ ಜಡ ರೂಪಗಳನ್ನು ಪ್ರತಿರೋಧಿಸಿ ಮಾನವತೆಗಾಗಿ ಹಾರೈಸಿದಂತೆ ಕುವೆಂಪು ಕೂಡ 'ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?' ಎಂದು ನಮ್ಮೆದೆಯ ದನಿಯೇ ನಮಗೆ ಶ್ರೀಧರ್ಮ ಸೂತ್ರ! ಎಂದು ತೋರಿಸಿದರು. ಆದ್ದರಿಂದಲೇ ಬಸವಣ್ಣ ಮತ್ತು ಕುವೆಂಪು ಕಲ್ಯಾಣ ಕರ್ನಾಟಕದ ಎಚ್ಚೆತ್ತ ವೈಚಾರಿಕ ಪ್ರಜ್ಞೆಯ ಸಂಕೇತಗಳು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ದಾಂಪತ್ಯದ ಯಶಸ್ಸಿಗೆ ಶ್ರೀಮಂತಿಕೆ, ಸೌಂದರ್ಯಕ್ಕಿಂತ ಇಬ್ಬರ ನಡುವಿನ ಗುಣ, ಸ್ವಭಾವಗಳ ಹೊಂದಾಣಿಕೆ ತುಂಬ ಮುಖ್ಯ.
  —ಕೃಷ್ಣಮೂರ್ತಿ ಪುರಾಣಿಕ್
- ಚಿಂತೆಗಳು ತಲೆಯ ಸುತ್ತ ಹಾರಾಡುವ ಹಕ್ಕಿಗಳಿದ್ದಂತೆ. ಹಾರಾಡಲು ಬಿಟ್ಟು ಬಿಡಿ. ಆದರೆ, ಅಲ್ಲೇ ಗೂಡು ಕಟ್ಟಲು ಬಿಡಬೇಡಿ.
  —ಸುಭಾಷಿತ
- ಪ್ರತಿ ಸಮಸ್ಯೆಯೂ ನಮಗೆ ಜೀವನದಲ್ಲಿ ಒಂದು ಕೊಡುಗೆ ಇದ್ದಂತೆ. ಏಕೆಂದರೆ ಸಮಸ್ಯೆಗಳಿಲ್ಲದೇ ನಾವು ಬೆಳೆಯಲಾರೆವು.
  —ಟೋನಿ ರಾಬಿನ್ಸ್
- ಒಳ್ಳೆಯ ಮಾತುಗಳನ್ನು ಆಡಿದರೆ ಸಾಲದು. ಆ ಮಾತುಗಳು ಒಳ್ಳೆಯ ಕೆಲಸಗಳನ್ನು ಪ್ರೇರೇಪಿಸುವಂತೆ ಇರಬೇಕು.
  —ಡಿ.ವಿ. ಗುಂಡಪ್ಪ
- ಕರುಣೆಯ ಸ್ಪರ್ಶದಿಂದ ಮಾತ್ರ ನಮ್ಮ ನೋವುಗಳು ಹಾಗೂ ಗಾಯಗಳು ಮಾಯಲು ಸಾಧ್ಯ.
  —ಗೌತಮ ಬುದ್ಧ
- ಕಣ್ಣಿಗೆ ಕಣ್ಣು ಎಂಬ ಸೇಡಿನ ಭಾವದಿಂದ ಹೊರಟರೆ ಇಡೀ ಜಗತ್ತು ಕುರುಡಾಗಿಬಿಡುತ್ತದೆ.
  —ಮಹಾತ್ಮ ಗಾಂಧಿ